೧೪) ವಿದ್ಯುತ್ ಕಡಿತದ ನೀತಿಯಲ್ಲಿ ಗ್ರಾಮಾಂತರ ಮತ್ತು ನಗರ ಪ್ರದೇಶಗಳ ಮಧ್ಯೆ ತಾರತಮ್ಯ ಮಾಡಿರುವುದು

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೇ, ವಿದ್ಯುತ್ ಕಡಿತದಲ್ಲಿ ಪಟ್ಟಣ, ನಗರ ಗಳಿಗೊಂದು ನೀತಿ, ಗ್ರಾಮಾಂತರ ಪ್ರದೇಶಕ್ಕೆ ಮತ್ತೊಂದು ನೀತಿ, ತಾತ್ಕಾಲಿಕ ಶಟ್‌ಡೌನ್ ಹೊರತು, ಪಟ್ಟಣ ಪ್ರದೇಶಗಳಲ್ಲಿ ದಿನಕಿಷ್ಟು ಅವಧಿ ಕಡಿತ ಮಾಡುವ ಕಾರ್ಯಕ್ರಮವಿಲ್ಲ. ಅಲ್ಲಿರುವ ರೈತರಿಗೆ ಸಹಾ ತಮ್ಮ ಹಿತ್ತಲು, ತೋಟಗಳಿಗೆ ನೀರು ಹಾಯಿಸಲು ಯಾವುದೇ ತೊಂದರೆ ಇಲ್ಲ. ಆದರೆ ಅದೇ ಗ್ರಾಮಾಂತರ ಪ್ರದೇಶದ ರೈತರಿಗೆ ಕೆಲವು ಕಡೆ ೩ ಗಂಟೆ, ಕೆಲವು ಕಡೆ ೮ ಗಂಟೆ ವಿದ್ಯುತ್ ಕಡಿತ. ಅದೂ ಎರಡು ಅವಧಿಗಳಲ್ಲಿ ಮಾಡುವ ಬದಲು, ಸತತ ಕಡಿತ. ಇದರಿಂದಾಗಿ ಕಷ್ಟಪಟ್ಟು ಸಾಲ ಮಾಡಿ ಬಾವಿ ತೋಡಿಸಿ ಪಂಪು ಹಾಕಿಸಿದ ರೈತರಬವಣೆ ಕೇಳುವವರಿಲ್ಲ. ಗ್ರಾಮಾಂತರ ಪ್ರದೇಶಗಳ ಚಿಕ್ಕ ಉದ್ದಿಮೆ ಗಳ ಗತಿ ಸಹ ಹೀಗೆಯೇ. ಸರ್ಕಾರ ಹಳ್ಳಿಯ ಜನರನ್ನು ದ್ವಿತೀಯ ದರ್ಜೆ ಪ್ರಜೆಗಳನ್ನಾಗಿ ಪರಿಗಣಿ ಸುವ ಪದ್ಧತಿ ತಪ್ಪಬೇಕು. ಪಟ್ಟಣ, ನಗರ, ಹಳ್ಳಿ ಗ್ರಾಮ ಎಂಬ ತಾರತಮ್ಯ ಇಲ್ಲದೆ ಏಕರೂಪದ ವಿದ್ಯುತ್ ಸರಬರಾಜು ಆಗಬೇಕು ಎಂದು ಒತ್ತಾಯಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ಇಲ್ಲಿ ನಾನು ಅನೇಕ ಸಲ ಉತ್ತರ ಕೊಟ್ಟಿದ್ದೇನೆ. ಆದರೂ ಸಹ ಮಾನ್ಯ ಸದಸ್ಯರ ಪ್ರಶ್ನೆಗೆ ಈ ಕೆಳಕಂಡ ಉತ್ತರವನ್ನು ಕೊಡುವುದಕ್ಕೆ ಬಯಸುತ್ತೇನೆ.

ರಾಜ್ಯದಲ್ಲಿ ಉಂಟಾಗಿರುವ ತೀವ್ರ ವಿದ್ಯುತ್ತಿನ ಕೊರತೆ ಕಾರಣದಿಂದಾಗಿ. ವಿದ್ಯುತ್ ಕೊರತೆ ಯನ್ನು ಎದುರಿಸಲು ಎಲ್ಲ ವರ್ಗದ ವಿದ್ಯುತ್ ಬಳಕೆದಾರರ ವಿದ್ಯುತ್ತಿನ ಉಪಯೋಗದ ಮೇಲೆ ಶೇ.೧೦ ರಿಂದ ಶೇ. ೮೦ ರವರೆಗೆ (ನೀರಾವರಿ ಪಂಪ್‌ಸೆಟ್ಟುಗಳು ಮತ್ತು ವಿದ್ಯುತ್ ಚಿತೆಗಾರ ಬಿಟ್ಟು) ಕಡಿತ ಹಾಕಲಾಗಿದೆ. ನಗರ ಪ್ರದೇಶದಲ್ಲಿನ ಬಳಕೆದಾರರು ವಿದ್ಯುತ್ ಕೊರತೆಯನ್ನು ಭರಿಸಲು ತಮ್ಮ ಪಾಲಿನ ಹೊರೆಯನ್ನು ಹೊರುತ್ತಿದ್ದಾರೆ. ಇದರ ಜೊತೆಗೆ ಬೆಳಿಗ್ಗೆ ಒಂದೂವರೆ ಗಂಟೆ ಸಾಯಂಕಾಲ ಅರ್ಧ ತಾಸು ಲೋಡ್‌ಶೆಡ್ಡಿಂಗ್ ಸಹ ವಿಧಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಮುಖ್ಯವಾಗಿ ನೀರಾ ವರಿ ಪಂಪ್‌ಸೆಟ್ಟುಗಳ ಲೋಡ್ ಇದೆ. ಈ ವರ್ಗದ ಬಳಕೆದಾರರು (ಗ್ರಾಮೀಣ) ವಿದ್ಯುತ್ ಕಡಿತಕ್ಕೆ ಒಳಪಟ್ಟಿಲ್ಲ. ಗ್ರಾಮೀಣ ಬಳಕೆದಾರರು ಸಹ ರಾಜ್ಯದಲ್ಲಿನ ವಿದ್ಯುತ್ ಕೊರತೆ ಬರಿಸಲು ಅವರ ಪಾಲಿನ ಸಹಾಯವನ್ನು ರಾಜ್ಯ ಸರ್ಕಾರ ಇಚ್ಚಿಸುತ್ತದೆ. ಪೂರ್ವಯೋಜಿತ ವಿದ್ಯುತ್ ನಿಲುಗಡೆ ಮೂಲಕ ರಾಜ್ಯದಲ್ಲಿ ಸ್ವಲ್ಪಮಟ್ಟಿಗೆ ವಿದ್ಯುತ್ ಅನ್ನು ಉಳಿಸಿ, ರಾಜ್ಯದ ಉಳಿದ ಕೊರತೆಯನ್ನು ಸ್ವಲ್ಪಮಟ್ಟಿಗೆ ಭರಿಸಲು ಸರ್ಕಾರ–ಮಂಡಲಿ ಪ್ರಯತ್ನಿಸಿದೆ. ಆದ್ದರಿಂದ ಪಟ್ಟಣ, ನಗರ, ಹಳ್ಳಿಗಳ ಎಲ್ಲ ವರ್ಗದವರೂ ಒಂದಲ್ಲ ಒಂದು ವಿಧದಲ್ಲಿ ಕೊರತೆ ತುಂಬಲು ಪಾಲ್ಗೊಳ್ಳುತ್ತಿದ್ದಾರೆ.

೧೫) ಬಾಹ್ಮಣರ ಸಕ್ಕರೆ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಹಣ ಪಾವತಿಯಾಗದೇ ಇರುವುದರ ಬಗ್ಗೆ

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೇ, ದಕ್ಷಿಣಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ (ರಿ), ಬ್ರಹ್ಮಾವರ, ಇವರಿಗೆ ಕಬ್ಬು ಸರಬರಾಜು ಮಾಡಿದ ಕಬ್ಬು ಬೆಳೆಗಾರರಿಗೆ ಕಬ್ಬಿನ ಹಣ ಇನ್ನೂ ಪಾವತಿ ಮಾಡಿಲ್ಲ. ಈ ವಿಚಾರ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೂ ಬಾಗೂ ವಿಧಾನಸಭೆಯಲ್ಲಿ ಮಾನ್ಯ ಸಹಕಾರಿ ಮಂತ್ರಿಗಳ ಗಮನಕ್ಕೆ ತಂದರೂ. ಕೂಡಲೇ ಪಾವತಿ ಮಾಡುತ್ತೇವೆ ಎಂಬ ಆಶ್ವಾಸನೆ ಕೊಟ್ಟಿರುವರು. ಆದರೆ ಈ ತನಕವೂ ಕಬ್ಬು ಬೆಳೆಗಾರರಿಗೆ ಬಾಕಿ ಹಣ ಎಲ್ಲಾ ಪಾವತಿ ಮಾಡಿಲ್ಲವೆ ಇರುವುದರಿಂದ ಕಬ್ಬು ಬೆಳೆಗಾರರಿಗೆ ತಮ್ಮ ಸಹಕಾರಿ ಸಂಘದಲ್ಲಿ ಮಾಡಿದ ಸಾಲವನ್ನು ಪಾವತಿ ಮಾಡಿ ಸರ್ಕಾರದ ಬಡ್ಡಿ ಸಹಾಯಧನ ಪಡೆಯಲು ತೊಂದರೆಗೆ ಒಳಪಟ್ಟಿರುವುದಕ್ಕೆ ಹೊಣೆ ಯಾರು ? ಇದು ರೈತರ ಉದ್ಧಾರವಾ ? ಇದಕ್ಕೆ ಸರ್ಕಾರದ ಕ್ರಮವೇನು ? ಹೆಚ್ಚಿನ ರೈತರು ಆರ್ಥಿಕ ಮುಗ್ಗಟ್ಟಿನಲ್ಲಿರುವುದರಿಂದ ತಮಗೆ ಪಾವತಿಯಾಗಬೇಕಾಗಿದ್ದ ಹಣದ ನಿರೀಕ್ಷೆಯಲ್ಲಿರುವರು. ಮೇ ತಿಂಗಳ ಕೊನೆಯ ಹೊತ್ತಿಗೆ ಕಬ್ಬು ಬೆಳೆಗಾರರ ಹಣ ಪಾವತಿ ಮಾಡದಿದ್ದರೆ, ಅವರು ಸಕ್ಕರೆ ಕಾರ್ಖಾನೆಯ ಆವರಣದಲ್ಲಿ ಸಾಮೂಹಿಕ ಮುಷ್ಕರ ಕೈಗೊಳ್ಳುವ ಭೀತಿ ಇದೆ. ಇದರಿಂದ ಈ

ಕಾರ್ಖಾನೆಯ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಕಬ್ಬು ಬೆಳೆಗಾರರಿಗೆ ಕೊಡಬೇಕಾದ ಹಣವನ್ನು ತಕ್ಷಣ ಪಾವತಿ ಮಾಡಿ ರೈತರ ಶೋಷಣೆ ನಿವಾರಿಸುವುದರೊಂದಿಗೆ, ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆಯ ಮೇಲಿರುವ ಜನರ ವಿಶ್ವಾಸ ನಂಬಿಕೆ ಕಳೆದುಕೊಳ್ಳದಂತೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಆರ್. ಬಿ. ಪೋತದಾರ್.—ಮಾನ್ಯ ಅಧ್ಯಕ್ಷರೇ, ಈ ಸಕ್ಕರೆ ಕಾರ್ಖಾನೆಯು ಕ್ರಷಿಂಗ್ ಕಡಿಮೆ ಆಗಿದೆ. ರೆಕವರಿ ೮.೨ ರಷ್ಟು ಇದೆ. ಮೊನ್ನೆ ಅಲ್ಲಿಗೆ ಸ್ಪೆಷಲ್ ಡಿ. ಸಿ. ಗ್ರೇಡ್‌ನ ಅಧಿಕಾರಿ ಒಬ್ಬರನ್ನು ಎಂ. ಡಿ. ಆಗಿ ನೇಮಕ ಮಾಡಿದ್ದೇವೆ. ಇದರ ಜೊತೆಗೆ ಡೈರೆಕ್ಟರ್ ಆಫ್ ಷುಗರ್ ಅವರಿಗೆ ಸಹ ಪೇಮೆಂಟ್ ಮಾಡುವುದಕ್ಕೆ ಹಿಂಟ್ ಕೊಟ್ಟಿದ್ದೇವೆ. ಹಿಂದಿನ ವಾರ ಸಹ ಅಲ್ಲಿನ ಸ್ಥಾನಿಕ ಎಂ ಎಲ್. ಎ. ಅವರು ಇದೇ ಪ್ರಶ್ನೆ ಕೇಳಿದ್ದರು. ಆದ್ದರಿಂದ ಬೇಗನೆ ಪೇಮೆಂಟ್ ಮಾಡುವುದಕ್ಕೆ ಹೇಳುತ್ತೇವೆ.

ವಿತ್ತೀಯ ಕಾರ್ಯಕಲಾಪಗಳು

೧೯೮೮-೮೯ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

(ಬೇಡಿಕೆಗಳ ಕ್ರ. ಸಂ. ೩೫, ೩೬, ೪೪, ೫೦, ೫೧, ೫೨ ಮತ್ತು ೫೩)

(ಕಂದಾಯ ಯೋಜನೆ ಮತ್ತು ನೀರಾವರಿ ಇಲಾಖೆಗಳು)

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ)— ಸನ್ಮಾನ್ಯ ಅಧ್ಯಕ್ಷರೇ ಈ ಸದನದಲ್ಲಿ ನೀರಾವರಿ ಮತ್ತು ರೆವಿನ್ಯೂ ಇಲಾಖೆಯ ಮೇಲೆ ಸಂಬಂಧಪಟ್ಟ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಯನ್ನು ನಾನು ಅನೇಕ ಲೋಪದೋಷದಿಂದಾಗಿ ವಿರೋಧಿಸಿ ನಾಲ್ಕು ಮಾತುಗಳನ್ನು ಆಡುವುದಕ್ಕೆ ಇಚ್ಛೆ ಪಡುತ್ತೇನೆ. ಅಧ್ಯಕ್ಷರೇ ಸರ್ಕಾರದ ಆಡಳಿತ ವ್ಯವಸ್ಥೆ ರೆವಿನ್ಯೂ ಇಲಾಖೆ ಏನಿದೆ ಇದು ಮುಖ್ಯವಾದಂಥ ಒಂದು ಇಲಾಖೆ. ಇದರ ಪ್ರಾಮುಖ್ಯತೆ ಬಹಳವಾಗಿದೆ. ಏಕೆಂದರೆ, ಈ ಪ್ರಾಮುಖ್ಯವಾದಂಥ ಇಲಾಖೆ ಸಮರ್ಪಕವಾಗಿ ಕೆಲಸವನ್ನು ನಿರ್ವಹಿಸದೇ ಹೋದರೆ ಬಹುಶ: ತಮ್ಮ ಆಡಳಿತದಲ್ಲಿ ಹೆಚ್ಚಿನ ಲೋಪದೋಷ ಇದೆ ಎಂದು ಭಾವನೆ ಮಾಡಬೇಕಾಗುತ್ತದೆ. ಅದರ ಪರಿಣಾಮ ಜನರು ತುಂಬ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಮೊದಲನೆಯದಾಗಿ, ಕಂದಾಯ ಇಲಾಖೆಯಲ್ಲಿ ಈ ಖಾತೆಗಳನ್ನು ಮಾಡತಕ್ಕಂಥ ಕಾರ್ಯಕ್ರಮ ಇದೆ. ಖಾತೆಗಳು ಅಂದರೆ ಜಮೀನುದಾರರು, ವ್ಯವಸಾಯಗಾರರೂ ನಮ್ಮ ರೈತರು ಅವರು ಹೊಂದಿರತಕ್ಕಂಥ ಭೂಮಿಯನ್ನು ಅವರ ಹೆಸರಿಗೆ ಖಾತೆ ಮಾಡತಕ್ಕಂಥ ಕಾರ್ಯಕ್ರಮ. ಇದು ಅನೇಕ ಸಂದರ್ಭಗಳಲ್ಲಿ ಉದ್ಭವವಾಗುತ್ತದೆ. ಒಬ್ಬರ ಆಸ್ತಿಯನ್ನು ಮತ್ತೊಬ್ಬರು ಕೊಂಡಾಗ ಇಲ್ಲದೇ ಹೋದರೆ ಸರ್ಕಾರಿ ಭೂಮಿಯನ್ನು ದರಖಾಸ್ತು ಮೂಲಕ ಪಡೆದಂಥ ಸಂದರ್ಭದಲ್ಲಿ ಇಲ್ಲವೇ ಅಣ್ಣ ತಮ್ಮಂದಿರು ವಿಭಾಗವಾಗತಕ್ಕಂಥ ಸಂದರ್ಭದಲ್ಲಿ ಆ ಭೂಮಿಯು ಒಡೆತನ ಯಾರದು ಎಂದು ನಿರ್ಧಾರ ಮಾಡತಕ್ಕಂಥ ಪ್ರಮುಖವಾದಂಥ ದಾಖಲೆ ಆದು. ಆ ದಾಖಲೆ ಸರಿಯಿಲ್ಲದೇ ಹೋದರೆ ಭೂಮಿ ಯಾರ ಸುಬರ್ದಿನಲ್ಲಿದೆ ಎನ್ನುವಂಥ ದೊಡ್ಡ ವಿವಾದಕ್ಕೆ ಒಳಗಾಗಿ ಹೊಡೆದಾಟ, ಕೊಲೆ, ಸುಲಿಗೆ, ವ್ಯಾಜ್ಯಗಳಿಗೆ ಕಾರಣವಾಗತಕ್ಕಂಥ ಪರಿಸ್ಥಿತಿ ಇದೆ. ಆದುದರಿಂದ ಇಂತಹ ಪ್ರಾಮುಖ್ಯವಾದಂಥ ಖಾತೆ ದಾಖಲೆಯನ್ನು ಸರಿಯಾದ ರೀತಿಯಲ್ಲಿ ಇಡತಕ್ಕಂಥಾದ್ದು ರೆವಿನ್ಯೂ ಇಲಾಖೆಯ ಆದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯವಾಗಿದೆ. ಮಾನ್ಯ ಅಧ್ಯಕ್ಷರೆ, ಆಸ್ತಿ ಒಬ್ಬರಿಂದ ಮತ್ತೊಬ್ಬರಿಗೆ ಕ್ರಯದ ಮೂಲಕ ಪರಬಾರೆ ಆದಾಗ ಹತ್ತಾರು ವರ್ಷಗಳಾದರೂ ಸಹ ಆದು ಯಾರ ಸುಬರ್ದಿನಲ್ಲಿದೆ. ಯಾರಿಗೆ ವರ್ಗಾವಣೆಯಾಗಿದೆ ಎಂದು ಖಾತೆಯನ್ನು ಸರಿಯಾಗಿ ಮಾಡತಕ್ಕಂಥ ಕೆಲಸ ಇಷ್ಟಾದರೂ ಆಗಲಿಲ್ಲ. ಜನಸಂಪರ್ಕ ಸಭೆಗಳನ್ನು ಕರೆದು, ಹಳ್ಳಿಗಳಿಗೆ ಹೋಗಿ ಖಾತೆಯಾಗದೇ ಇರತಕ್ಕಂಥಾದ್ದನ್ನು ಪಡೆದು ಆದಷ್ಟು ಬೇಗ ಮಾಡಬೇಕು ಎಂದು ಕ್ರಮ ತೆಗೆದುಕೊಂಡರೂ ಸಹ ಅನೇಕ ಸಂದರ್ಭಗಳಲ್ಲಿ ಖಾತೆಗಳಲ್ಲಿ ಅನಗ ಸೇರಿ ಇಲ್ಲಿಗೆ ಅನೇಕ ವ್ಯಾಜ್ಯಗಳಿಗೆ ಕಾರಣವಾಗಿರತಕ್ಕಂಥ ಸನ್ನಿವೇಶವಿದೆ. ಆದುದರಿಂದ ಆಸ್ತಿ ಒಬ್ಬರಿಂದ ಮತ್ತೊಬ್ಬರಿಗೆ ಪರಭಾರೆಯಾದಾಗ, ರಿಜಿಸ್ಟರ್ ಆದಾಗ, ಜಮೀನನ್ನು